ಓ.ಎಸ್. ನಂ. 37/2016 ಡಿ.ಡಬ್ಲೂಃ 1

ದಿನಾಂಕಃ 27.10.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

ಮುಂದುವರೆದ ಪಾಟೀಸವಾಲು ಶ್ರೀ. ಆರ್.ಡಿ.ಆರ್. ವಕೀಲರಿಂದ

ಓ.ಎಸ್. 270/2016 ರ ಪ್ರಕರಣ ವಜಾ ಆಗಿರುತ್ತದೆ. ಸದರಿ ದಾವೆಯನ್ನು ನನ್ನ ತಾಯಿ, ನನ್ನ ಅಣ್ಣ ಕೂಡಿಕೊಂಡು ದಾವೆಯನ್ನು ಹೂಡಿದ್ದೆವು. ಸದರಿ ದಾವೆಯನ್ನು ಸರ್ವೆ ನಂಬರ್ 106/15 ಕ್ಕೆ ಸಂಬಂಧಿಸಿದಂತೆ ದಾವೆಯನ್ನು ಹೂಡಿದ್ದೆವು. ಸದರಿ ದಾವೆಯನ್ನು 17 ಗುಂಟೆಗೆ ಸಂಬಂಧಿಸಿದಂತೆ ಹೂಡಲಾಗಿತ್ತು. ಈ ಹಂತದಲ್ಲಿ ಸಾಕ್ಷಿಗೆ ಓ.ಎಸ್. 270/2016 ರ ತೀರ್ಪು ಮತ್ತು ಡಿಕ್ರಿಯನ್ನು ತೋರಿಸಲಾಗಿ ಸಾಕ್ಷಿಯು ಹೌದು ಎಂದು ಉತ್ತರಿಸುತ್ತಾರೆ. ಸದರಿ ದಾಖಲೆಯನ್ನು ನಿಪಿ 106 ಮತ್ತು 107 ಎಂದು ಗುರುತಿಸಲಾಯಿತು. ಸದರಿ ದಾವೆಯನ್ನು ನನ್ನ ತಾಯಿ ಸುಂದ್ರಮ್ಮನವರು ಮಾತ್ರ ಹೂಡಿದ್ದರು ಎಂದರೆ ಹೌದು. ದಾವೆಯನ್ನು ಹೂಡುವ ಕಾಲಕ್ಕೆ ಸರ್ವೆ ನಂಬರ್ 106/15 ಸುಂದ್ರಮ್ಮನ ಹೆಸರಿನಲ್ಲಿ ಇತ್ತು. ಸದರಿ ದಾವೆಯನ್ನು ನನ್ನ ಚಿಕ್ಕಪ್ಪ ಮೋಹನರವರ ವಿರುದ್ಧ ಮಾತ್ರ ಹೂಡಲಾಗಿತ್ತು . ಸಾಕ್ಷಿ ಮುಂದುವರೆದು ಸತೀಶ್ ರವರ ವಿರುದ್ಧ ಹೂಡಲಾಗಿತ್ತು ಎಂದು ಉತ್ತರಿಸುತ್ತಾರೆ. ಓ.ಎಸ್. 270/2016 ರ ತೀರ್ಪಿನ ವಿರುದ್ಧ ಅಪೀಲನ್ನು ಸಲ್ಲಿಸಲಾಗಿರುತ್ತದೆ. ಅಪೀಲ್ ನಂಬರ್ ಗೊತ್ತಿಲ್ಲ. ನನ್ನ ಚಿಕ್ಕಪ್ಪ ಕೆ.ಸಿ. ಮೋಹನ ದಾವಾ ಸ್ವತ್ತಿನಲ್ಲಿ ಅರ್ಧ ಆಸ್ತಿ ಬರಬೇಕೆಂದು ದಾವೆಯನ್ನು ಹೂಡಿರುತ್ತಾರೆ.

ವಾದ ಪತ್ರದ ಸಂಗತಿಗಳನ್ನು ತಿಳಿದುಕೊಂಡು ನಾನು ಈ ಪ್ರಕರಣದಲ್ಲಿ ತಕರಾರನ್ನು ಸಲ್ಲಿಸಿರುತ್ತೇನೆ. ವಾದ ಪತ್ರದಲ್ಲಿ ದಾವಾ ಅನುಸೂಚಿ ಸಿ ಸ್ವತ್ತುಗಳಿಗೆ ಮಾಲೀಕರೆಂದು ಘೋಷಣೆ ಮಾಡಲು ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸಿ ನಲ್ಲಿ ನಮೂದಿಸಿರುವಂತಹ ಸ್ವತ್ತುಗಳಿಗೆ ಸಂಬಂಧಿಸಿದಂತೆ ಮಾಲೀಕರೆಂದು ಘೋಷಣೆ ಮಾಡಲು ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಭುಜಂಗಸ್ವಾಮಿ, ಚಿಕ್ಕಪ್ಪ ಮೋಹನ, ಅಕ್ಕ ಲತಾಮಣಿ, ಹಾಗೂ ಸೋದರ ಅತ್ತೆ ದೇವಿರಮ್ಮನವರು ಮಾಡಿಕೊಂಡಂತಹ ವಿಭಾಗ ಪತ್ರದಂತೆ ಸ್ವತ್ತುಗಳು ಖಾತೆಯಾಗಿರುತ್ತದೆ ಎಂದರೆ ಹೌದು. ಮೇಲೆ ಹೇಳಿದಂತಹ ಲತಾಮಣಿ, ದೇವಿರಮ್ಮ, ಭುಜಂಗಸ್ವಾಮಿ ರವರು ಖಾತೆ ಬದಲಾವಣೆ ಕುರಿತಂತೆ ಒಂದು ಪ್ರಮಾಣ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಓ.ಎಸ್. 23/2016 ರ ಪ್ರಕರಣದಲ್ಲಿ ಸದರಿ ಪ್ರಮಾಣ ಪತ್ರವನ್ನು ನಾನು ಒಪ್ಪಿದ ಕಾರಣ ನ್ಯಾಯಾಲಯದಲ್ಲಿ ನಿಶಾನೆಯಾಗಿ ಗುರುತಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ತಂದೆ ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು. ನನ್ನ ಅಕ್ಕ ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕುತ್ತಿದ್ದರು. ದೇವಿರಮ್ಮ ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕುತ್ತಿದ್ದರು. ನನ್ನ ತಂದೆಯವರ ಸಹಿಯನ್ನು ನೋಡಿದರೆ ನಾನು ಗುರುತಿಸಬಲ್ಲೆ. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ತನ್ನ ತಂದೆಯ ಸಹಿಯಲ್ಲ ಎಂದು ನಿರಾಕರಣೆ ಮಾಡಿರುತ್ತಾರೆ. ಓ.ಎಸ್. 23/2016 ರ ಪ್ರಕರಣದಲ್ಲಿ ಪ್ರಮಾಣ ಪತ್ರದಲ್ಲಿನ ಸಹಿಯನ್ನು ನನ್ನ ತಂದೆಯದ್ದು ಎಂದು ಒಪ್ಪಿದ ಕಾರಣ ಸದರಿ ದಾಖಲೆಯು ನಿಡಿ 1 ಎಂದು ಗುರುತಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಅನುಸೂಚಿ ಸಿ ಸ್ವತ್ತುಗಳಲ್ಲಿ ಹಿಸ್ಸೆಯಾದ ನಂತರ ಮೋಹನ್ ರವರು ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ಮೋಹನ್

ರವರು ಸ್ವಾಧೀನದಲ್ಲಿದ್ದರು ಸಹಾ ನಾನು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೋಹನ್ ರವರು ಸ್ವಾಧೀನದಲ್ಲಿ ಇದ್ದಂತಹ ಸ್ವತ್ತುಗಳನ್ನು ಸತೀಶ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದ್ದಂತೆ ಮಾರಾಟ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ನಾನೇ ಮುಂದೆ ನಿಂತು ಸತೀಶ್ ರವರಿಗೆ ಸ್ವತ್ತುಗಳನ್ನು ವ್ಯಾಪಾರ ಮಾಡಿ ಕೊಡಿಸಿದ್ದು ಈಗ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮೋಹನ್ ರವರಿಗೆ ಮಕ್ಕಳಿಲ್ಲ ಎಂಬ ಕಾರಣದಿಂದ ಸ್ವತ್ತುಗಳನ್ನು ಕಬಳಿಸಲು ವಿನಾಕಾರಣ ಅವರ ವಿರುದ್ದ ದಾವೆಗಳನ್ನು ಹೂಡಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಕ್ಕ ಲತಾಮಣಿ ಅವರ ಜೀವಿತ ಕಾಲದಲ್ಲಿ ಅವರ ಹಿಸ್ಸೆಗೆ ಬಂದಂತಹ ಸ್ವತ್ತಿನಲ್ಲಿ ಸ್ವಾಧೀನ ಇದ್ದರು ಎಂದರೆ ಹೌದು. ಲತಾಮಣಿ ಮೃತಪಟ್ಟ ನಂತರ ಲತಾಮಣಿಯವರ ಗಂಡ ಹಾಗೂ ಅವರ ಮಗ ಸ್ವತ್ತಿನ ಅನುಭವ ಮಾಡಿಕೊಂಡು ಬರುತ್ತಿರುತ್ತಾರೆ ಎಂದರೆ ಹೌದು. ನನ್ನ ಸೋದರ ಅತ್ತೆ ದೇವಿರಮ್ಮನವರಿಗೆ ನೀಡಿದಂತಹ ಸ್ವತ್ತು ದೇವಿರಮ್ಮನ ಸ್ವಾಧೀನದಲ್ಲಿ ಇದೆ ಎಂದರೆ ಹೌದು. ನಮ್ಮ ಕುಟುಂಬಕ್ಕೆ ಒಟ್ಟಾಗಿ 37 ರಿಂದ 38 ಸ್ವತ್ತುಗಳು ಇರುತ್ತದೆ. ಈ ಪೈಕಿ 24 ಸ್ವತ್ತುಗಳಿಗೆ ಸಂಬಂಧಿಸಿದಂತೆ ನನ್ನ ತಂದೆಯವರ ಹಿಸ್ಸೆಗೆ ಸ್ವತ್ತುಗಳು ಬಂದು ಖಾತೆಯಾಗಿರುತ್ತದೆ ಎಂದರೆ ಬಂದಿರಬಹುದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ಜೀವಂತ ಇದ್ದಾಗ ನನ್ನ ಅಣ್ಣ ಶಿವಕುಮಾರ್‌ನ ಹೆಸರಿಗೆ ಕೆಲವು ಸ್ವತ್ತುಗಳನ್ನು ಖಾತೆ ಮಾಡಿಸಿದ್ದರು ಎಂದರೆ ಹೌದು. ಭುಜಂಗಸ್ವಾಮಿ ಮೃತಪಟ್ಟ ನಂತರ ಶಿವಕುಮಾರನ ಹೆಸರಿನಲ್ಲಿದ್ದಂತಹ ಸ್ವತ್ತುಗಳು ನನ್ನ ಹೆಸರಿಗೆ ಖಾತೆ ವರ್ಗಾವಣೆಯಾಗಿರುತ್ತದೆ. ಭುಜಂಗಸ್ವಾಮಿ ಹೆಸರಿನಲ್ಲಿನ ಸ್ವತ್ತುಗಳು ನನ್ನ ತಾಯಿ ಹೆಸರಿಗೆ ಖಾತೆ ವರ್ಗಾವಣೆಯಾಗಿರುತ್ತದೆ. ನನ್ನ ಹೆಸರಿಗೆ 9 ಸ್ವತ್ತುಗಳು ಖಾತೆಯಾಗಿರುತ್ತದೆ. ನನ್ನ ತಾಯಿ

ಹೆಸರಿಗೆ 12 ಸ್ವತ್ತುಗಳು ಖಾತೆಯಾಗಿರುತ್ತದೆ. ಶಿವಕುಮಾರನ ಹೆಸರಿಗೆ 5-6 ಸ್ವತ್ತುಗಳು ಖಾತೆಯಾಗಿರಬಹುದು. ಮೇಲೆ ಹೇಳಿದಂತಹ ಸ್ವತ್ತುಗಳನ್ನು ನಾವು ಅನುಭವ ಮಾಡಿಕೊಂಡು ಬರುತ್ತಿದ್ದೇವೆ ಎಂದರೆ ಹೌದು. ಈ ಮೊದಲೇ ಕುಟುಂಬದಲ್ಲಿ ವಿಭಾಗವಾಗಿ ಸ್ವತ್ತುಗಳನ್ನು ಅನುಭವ ಮಾಡಿಕೊಂಡು ಬರುತ್ತಿದ್ದು, ನ್ಯಾಯಾಲಯದಲ್ಲಿ ವಿಭಾಗವಾಗಿರುವುದಿಲ್ಲ ಎಂದು ಸುಳ್ಳು ಸಾಧನೆ ಮಾಡುತ್ತಿರುತ್ತೇವೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲಾ.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

(ಅಮರ್ ವಿ.ಎಲ್.)
ಸೀನಿಯರ್ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ ಹೊಳೆನರಸೀಪುರ